**ಚಾಸಾಃ 7 ಪ್ರಾಸಾಃ 12**

# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ, ದ. ಕ.

## ಪ್ರಕರಣ ಸಂಖ್ಯೆ ಸಿಸಿ. 388/2014

| | |
|---|---|
| ಹೆಸರು | ಃ ಪ್ರಶಾಂತ್ |
| ತಂದೆಯ ಹೆಸರು | ಃ ಶ್ರೀವರ್ಮ |
| ವಯಸ್ಸು | ಃ 35 ವರ್ಷ |
| ಉದ್ಯೋಗ | ಃ ಹೋಟೇಲ್ ಉದ್ಯಮ |
| ವಾಸ | ಃ ಬೆಂಗಳೂರು |

ದಿನಾಂಕ 26.6.2019 ರಂದು ಪ್ರಮಾಣವಚನ ಬೋದಿಸಲಾಯಿತು.

**ಮುಖ್ಯ ವಿಚಾರಣೆ ಸ. ಸ. ಅ. ರವರಿಂದ ಃ**

ದಿಃ 18.7.12 ರಂದು ಬೆಳ್ತಂಗಡಿ ಪೊ.ಠಾಣೆಯಲ್ಲಿ ಬಂಟ್ವಾಳ ಪೊಲೀಸರು ಈ ಪ್ರಕರಣದಲ್ಲಿ ಕಳುವಾದ ಬಂಗಾರದ ಆಭರಣಗಳನ್ನು ಠಾಣೆಯಲ್ಲಿ ಹಾಜರು ಮಾಡಿದ ಮೇರೆಗೆ ಅವುಗಳನ್ನು ಸ್ವಾದೀನ ಪಡಿಸಿಕೊಂಡು ಬೆಳ್ತಂಗಡಿ ಪೊಲೀಸರು ಸೊತ್ತು ಸ್ವಾದೀನ ಮಹಜರನ್ನು ಜರುಗಿಸಿದರು. ಮಹಜರಿನಡಿ 2 ಚಿನ್ನದ ಸರ, ಒಂದು ಬೆಂಡೋಲೆ, ಒಂದು ಕಿವಿಯ ರಿಂಗ್, ಒಂದು ಜೊತೆ ಕಾಲುಚೈನು, 35 ಗ್ರಾಂನ ಬೆಳ್ಳಿಯ ಸೊಂಟದ ಚೈನು, ಒಂದು ಕಾಲುಂಗುರ ಒಟ್ಟಾರೆ 7 ಆಭರಣಗಳನ್ನು ಸ್ವಾದೀನ ಪಡಿಸಿಕೊಂಡರು. ಅವುಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಇಂದು ನ್ಯಾಯಾಲಯಕ್ಕೆ ಚಾಸಾ1ರವರು ಬಂಗಾರದ ಆಭರಣಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಎಂ. ಒ 1 ರಿಂದ 9 ಎಂದು ಗುರುತಿಸಲಾಗಿದೆ. ಮಹಜರನ್ನು ಈಗಾಗಲೇ ನಿಪಿ3 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ3ಸಿ ಎಂದು ಅಸಲು ಸಿಸಿ 774/2013 ರಲ್ಲಿ ಸಾಕ್ಷಿಯು ಪ್ರಾಸಾ-8 ಆಗಿ ವಿಚಾರಣೆಗೆ ಒಳಪಟ್ಟಿದ್ದು ಅದರಲ್ಲಿ ಗುರುತಿಸಲಾಗಿರುತ್ತದೆ, ಅದನ್ನೆ ಗಣನೆಗೆ ತೆಗೆದುಕೊಳ್ಳಲಾಯಿತು.

**ಪಾಟೀ ಸವಾಲು ಶ್ರೀ. ಎ. ಎಸ್. ಕೆ. ವಕೀಲರಿಂದ ಆರೋಪಿ ಪರ :**

ಚಾಸಾ1ರವರು ನನಗೆ ಠಾಣೆಗೆ ಬರಲು ನನಗೆ ಅದೇ ದಿವಸ ಬೆಳಿಗ್ಗೆ ಹೇಳಿದರು. ನಾನು ಠಾಣೆಗೆ ಹೋಗುವ ಮೊದಲು ಬಂಟ್ವಾಳ ಪೊಲೀಸರು ಮತ್ತು ಒಬ್ಬರು ಬಂಗಾರ ಕೆಲಸ ಮಾಡುವವರು ಠಾಣೆಯಲ್ಲಿದ್ದರು. ಆಚಾರಿಯ ಬಳಿ ಬಂಗಾರಗಳನ್ನು ತೂಕ ಮಾಡುವ ಉಪಕರಣ ಇತ್ತು, ನಮ್ಮ ಎದುರಿಗೆ ಬಂಗಾರವನ್ನು ತೂಕ ಮಾಡಿರುವುದಿಲ್ಲ. ಚಾಸಾ1ರವರಿಂದ ಏನೆಲ್ಲ ಕಳ್ಳತನ ಆಗಿತ್ತು ಎಂದು ನನಗೆ ಮೊದಲೇ ಗೊತ್ತಿತ್ತು. ಚಾಸಾ1ರವರ ಹೆಂಡತಿ, ಮಕ್ಕಳು ಮದುವೆ ಮತ್ತು ಇತರ ಸಮಾರಂಭಗಳಲ್ಲಿ ಕಳುವಾದ ಆಭರಣಗಳನ್ನು ಧರಿಸಿರುವುದನ್ನು ನೋಡಿರುತ್ತೇನೆ. ಬಂಗಾರದ ಚೈನುಗಳು ಯಾವ ಡಿಸೈನ್ ಎಂದು ನನಗೆ ಹೇಳಲಾಗುವುದಿಲ್ಲ. ಓಲೆಗಳು ಒಂದು ರಿಂಗ್ ಟೈಪ್ ಇದ್ದು ಇನ್ನೊಂದು ಯಾವ ತರಹದ್ದು ಎಂದು ಹೇಳಲಾಗುವುದಿಲ್ಲ. ಕಾಲು ಚೈನಿನಲ್ಲಿ ಗೆಜ್ಜೆಗಳು ಇದ್ದವು. ಸೊಂಟದ ಚೈನಿನಲ್ಲಿ ಗೆಜ್ಜೆ ಇತ್ತೊ ಇಲ್ಲವೋ ಎಂದು ಹೇಳಲಾಗುವುದಿಲ್ಲ. ಮಗುವಿನ ಬೆಳ್ಳಿ ಚೈನು ಇದ್ದು ಅದು ಯಾವ ಡಿಸೈನ್ ಎಂದು ನನಗೆ ಹೇಳಲಾಗುವುದಿಲ್ಲ. ಬಂಗಾರದ ರಿಂಗ್ ದೊಡ್ಡ ಗಾತ್ರದ್ದು ಇತ್ತು. ಮಹಜರಿನಲ್ಲಿ 4 ಗ್ರಾಂನ ದೊಡ್ಡ ರಿಂಗ್ ಎಂದು ಬರೆಯಲಾಗಿತ್ತು. ನಿಪಿ3 ರಲ್ಲಿ ಚಿಕ್ಕ ರಿಂಗ್ ಎಂದು ಬರೆಯಲಾಗಿದೆ ಎಂದರೆ ನಿಜ. ಬೆಂಡೋಲೆಗೆ ಜುಮುಕಿ ಅಥವಾ ಇತರೆ ಚೈನ್ ಇತ್ತೊ ಇಲ್ಲವೋ ಈಗ ನನಗೆ ನೆನಪಿರುವುದಿಲ್ಲ. ಚಾಸಾ1 ನನಗೆ ಸಂಬಂಧಿಕರು. ಚಾಸಾ1 ನನಗೆ ಸಂಬಂಧಿಯಾದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಠಾಣೆಗೆ ಹೋಗಿರುವುದಿಲ್ಲ. ಯಾವುದೇ ಮಹಜರು ಮಾಡಿರುವುದಿಲ್ಲ. ಆಭರಣಗಳನ್ನು ಜಪ್ತಿ ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ ಒ ಹೇ ಕೆ ಸ ಇ ಎ ಒ

ಪ್ರಧಾನ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಬೆಳ್ತಂಗಡಿ 26-6-2019